# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮ ವಿಕಾಸ ಯೋಜನೆಯಡಿ ಶೃಂಗೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆಯ್ಕೆಯಾದ ಗ್ರಾಮಗಳ ಆಯ್ಕೆ ಪಟ್ಟಿಯನ್ನು ವಿಶೇಷ ಪ್ರಕರಣವೆಂದು ಅನುಮೋದಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:50:ಸುಗ್ರಾಯೋ:2012 ದಿ:20.10.2014

2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಚಿಕ್ಕಮಗಳೂರು ಇವರ ಪತ್ರ ಸಂಖ್ಯೆ:ಜಿಪಂಚಿ:ಅ3: ಗ್ರಾ.ಪಂ/ಗ್ರಾವಿಯೋ/46/ 2014-15 ದಿನಾಂಕ 09.09.2015.

3. ಶಾಸಕರು ಶೃಂಗೇರಿ ವಿಧಾನ ಸಭಾ ಕ್ಷೇತ್ರ ಇವರು ಮಾನ್ಯ ಸಚಿವರಿಗೆ ಬರೆದ ಪತ್ರ ದಿನಾಂಕ: 27.08.2015.

***

**ಪ್ರಸ್ತಾವನೆ:**

ಗ್ರಾಮಗಳ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 1000 ಗ್ರಾಮಗಳನ್ನು ಗ್ರಾಮ ವಿಕಾಸ ಯೋಜನೆಯಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಅನುಷ್ಠಾನ ಮಾಡುವ ಬಗ್ಗೆ ಗ್ರಾಮಗಳ ಆಯ್ಕೆ, ಅನುದಾನ ಹಂಚಿಕೆ ಇತ್ಯಾದಿ ವಿಷಯಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ಮೇಲೆ ಓದಲಾದ (1) ರ ಸರ್ಕಾರದ ಆದೇಶವನ್ನು ಹೊರಡಿಸಿ ಅದರಂತೆ ಮಾರ್ಗಸೂಚಿಯನ್ನು ಹೊರತರಲಾಗಿದೆ. ಅದರನ್ವಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಇವರಿಂದ ಮಾರ್ಗಸೂಚಿಯ ಪ್ರಕಾರ ಪ್ರಸ್ತಾಪಿತಗೊಂಡ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಗ್ರಾಮ ವಿಕಾಸ ಯೋಜನೆಯಡಿ ಪರಿಗಣಿಸಲು ಕ್ರಮ ವಹಿಸಲಾಗಿದೆ.

ಓದಲಾದ 2 ಮತ್ತು 3 ರ ಪತ್ರದಲ್ಲಿರುವಂತೆ ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಅರಳೀಕೊಪ್ಪ, ಹಲಸೂರು, ಕರ್ಕೇಶ್ವರ ಮತ್ತು ಮೆಣಸೆ ಗ್ರಾಮಗಳು ಈ ಹಿಂದೆ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿದ್ದರೂ ಸಹ ಸದರಿ ಗ್ರಾಮಗಳ ಸಮಗ್ರ ಅಭಿವೃದ್ಧಿ ಹಿನ್ನೆಲೆಯಲ್ಲಿ ವಿಶೇಷ ಪ್ರಕರಣವೆಂದು ಗ್ರಾಮ ವಿಕಾಸ ಯೋಜನೆಯಡಿ ಪರಿಗಣಿಸಲು ಸರ್ಕಾರಕ್ಕೆ ಸಲ್ಲಿಸಿದ್ದ ಮನವಿಯನ್ನು ಪರಿಗಣಿಸಲಾಗಿದೆ. ಅದರಂತೆ ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಅರಳೀಕೊಪ್ಪ, ಹಲಸೂರು, ಕರ್ಕೇಶ್ವರ ಮತ್ತು ಮೆಣಸೆ ಗ್ರಾಮಗಳನ್ನು ಒಳಗೊಂಡಂತೆ ಅನುಬಂಧದಲ್ಲಿರುವ ಗ್ರಾಮಗಳ ಪಟ್ಟಿಯಂತೆ ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ : 12 : ಗ್ರಾವಿಯೋ : 2015 ಬೆಂಗಳೂರು, ದಿನಾಂಕ 21.09.2015

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಅರಳೀಕೊಪ್ಪ, ಹಲಸೂರು, ಕರ್ಕೇಶ್ವರ ಮತ್ತು ಮೆಣಸೆ ಗ್ರಾಮಗಳನ್ನು ಒಳಗೊಂಡಂತೆ ಅನುಬಂಧದಲ್ಲಿರುವ ಗ್ರಾಮಗಳ ಪಟ್ಟಿಯಂತೆ ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

ಯೋಜನೆಯನ್ನು ಅನುಷ್ಠಾನದೊಳಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಆದೇಶಿಸಿದೆ.

1. ಅನುಬಂಧದಲ್ಲಿ ವಿವರಿಸಿರುವಂತೆ ಗ್ರಾಮಗಳಿಗೆ ನಿಗಧಿಪಡಿಸಿರುವ ಅನುದಾನದ ಮಿತಿಯಂತೆ ಕ್ರಮ ವಹಿಸುವುದು.

2. ಗ್ರಾಮ ಪಂಚಾಯತಿಗಳು ವಾರ್ಡ್‌ಸಭೆ / ಗ್ರಾಮಸಭೆಗಳನ್ನು ನಡೆಸಿ ಗ್ರಾಮಾಭಿವೃದ್ಧಿ ಯೋಜನೆಯನ್ನು ಮಾರ್ಗಸೂಚಿಯಲ್ಲಿರುವಂತೆ ತಯಾರಿಸಿ ಗ್ರಾಮ ಪಂಚಾಯತಿಯ ಅನುಮೋದನೆಯನ್ನು ಪಡೆಯುವುದು. ಅನುಮೋದನೆಯಾದ ಗ್ರಾಮಾಭಿವೃದ್ಧಿ ಯೋಜನೆಯನ್ನು ತಾಲ್ಲೂಕು, ಜಿಲ್ಲಾ ಪಂಚಾಯತಿ ಹಾಗೂ ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸುವುದು.

3. ಗ್ರಾಮ ಪಂಚಾಯತಿಗಳು ಎಸ್‌ಸಿಪಿ / ಟಿಎಸ್‌ಪಿ ಯೋಜನೆಯಡಿ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ಕಾಲೋನಿಗಳ ಅಭಿವೃದ್ಧಿಗೆ ಕೈಗೊಳ್ಳುವ ಕ್ರಿಯಾ / ಗ್ರಾಮಾಭಿವೃದ್ಧಿ ಯೋಜನೆಯನ್ನು ಪ್ರತ್ಯೇಕವಾಗಿ ಕಡ್ಡಾಯವಾಗಿ ತಯಾರಿಸುವುದು.

4. ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ ಕ್ರಿಯಾ ಯೋಜನೆಯನ್ನು ತಯಾರಿಸುವಾಗ ಒಟ್ಟು ಅನುದಾನದ ಪೈಕಿ ಕನಿಷ್ಠ ಶೇ.18% ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ ವರ್ಗದವರಿಗೆ ಮತ್ತು ಕನಿಷ್ಠ ಶೇ:7% ರಷ್ಟು ಅನುದಾನವನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡುವುದು.

5. ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ 5 ಗ್ರಾಮಗಳ ಪೈಕಿ ಹೆಚ್ಚು ಎಸ್‌ಸಿ, ಎಸ್‌ಟಿ ಜನಸಂಖ್ಯೆ ಹೊಂದಿರುವ 2 ಗ್ರಾಮ ಅಥವಾ 5 ಗ್ರಾಮಗಳ ಬದಲಿಗೆ ಒಂದೇ ಗ್ರಾಮವನ್ನು ಆಯ್ಕೆ ಮಾಡಿದ ಸಂದರ್ಭದಲ್ಲಿಯೂ ಸಹ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದವರು ವಾಸಿಸುವ ಕಾಲೋನಿಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವುದು.

6. ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದವರಿಗೆ ಮೀಸಲಾದ ಅನುದಾನವನ್ನು ಯಾವುದೇ ಕಾರಣಕ್ಕೂ ಮಾರ್ಗಪಲ್ಲಟ ಮಾಡುವಂತಿಲ್ಲ ಹಾಗೂ ಅನುಮೋದಿತ ಯೋಜನೆಯಂತೆ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ಕಾಲೋನಿಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

7. ಗ್ರಾಮ ಪಂಚಾಯತಿಗಳು ಗ್ರಾಮಾಭಿವೃದ್ಧಿ ಯೋಜನೆಯನ್ನು ತಯಾರಿಸುವಾಗ ಮುಖ್ಯ ಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಮಾರ್ಗಸೂಚಿಯ ಪುಟ ಸಂಖ್ಯೆ 27 ರಲ್ಲಿನ 5.1.2 ರಲ್ಲಿ ಸೂಚಿಸಿರುವ ಪರಿಮಾಣಗಳಂತೆ ಅಳವಡಿಸುವುದು ಹಾಗೂ ಕಾರ್ಯಕ್ರಮವಾರು ಭರಿಸುವ ಅನುದಾನವನ್ನು ಸಹ ಪ್ರತ್ಯೇಕವಾಗಿ ನಮೂದಿಸುವುದು.

8. ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾರ್ಗಸೂಚಿ ಪುಸ್ತಕದ ಪುಟ ಸಂಖ್ಯೆ 61 ಮತ್ತು 62 ರಲ್ಲಿರುವ ಯೋಜನೆಯ ಅನುಷ್ಠಾನದ ವೇಳಾಪಟ್ಟಿಯಂತೆ ಅನುಷ್ಠಾನಕ್ಕೆ ತಂದು ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಕ್ಟೋಬರ್ 2, 2016ರ ಒಳಗಾಗಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳುವುದು.

9. ಶಾಸಕರ ಅಧ್ಯಕ್ಷತೆಯಲ್ಲಿ ರಚನೆಯಾದ ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿ ಸಭೆಯನ್ನು ಕಡ್ಡಾಯವಾಗಿ 2 ತಿಂಗಳಿಗೊಮ್ಮೆ ನಡೆಯುವಂತೆ ಕ್ರಮ ಕೈಗೊಳ್ಳುವುದು. ಪ್ರಗತಿಯನ್ನು ಪರಾಮರ್ಶಿಸಿ ಗ್ರಾಮದ ಅಭಿವೃದ್ಧಿಗೆ ಎಲ್ಲಾ ರೀತಿಯ ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ಪಡೆದು ಮತ್ತು ವಿವಿಧ ಯೋಜನೆಗಳಲ್ಲಿ ಲಭ್ಯವಾಗುವ ಅನುದಾನವನ್ನು ಒಗ್ಗೂಡಿಸಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವುದು.

10. ಗ್ರಾಮ ವಿಕಾಸ ಯೋಜನೆಯ ಅನುದಾನ ಹಾಗೂ ಒಗ್ಗೂಡಿಸಿದ ಕಾರ್ಯಕ್ರಮಗಳ ಅನುದಾನವನ್ನು ಪ್ರತ್ಯೇಕ ವಹಿಗಳಲ್ಲಿ (Separate Register) ನಿರ್ವಹಿಸುವುದು ಹಾಗೂ ಆಯಾ ಕಾರ್ಯ ಕ್ರಮಗಳ ಅನುದಾನವನ್ನು ಬಳಸುವಾಗ ಸರ್ಕಾರ ಹೊರಡಿಸಿದ ಆದೇಶ/ ಮಾರ್ಗಸೂಚಿ/ ಸುತ್ತೋಲೆಗಳನ್ವಯ ಅನುಷ್ಠಾನಕ್ಕೆ ತರುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೋವನಹಳ್ಳಿನಾಗರಾಜ್)
ನಿರ್ದೇಶಕರು (ಸುಗ್ರಾಯೋ) ಹಾಗೂ
ಪ್ರದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಪ್ರತಿಯನ್ನು ಮಾಹಿತಿಗಾಗಿ:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು
2. ಮಹಾಲೇಖಪಾಲರು (ಆಡಿಟ್-1 & 2) ಕರ್ನಾಟಕ, ಬೆಂಗಳೂರು
3. ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ಮುಖ್ಯ ಮಂತ್ರಿಗಳ ಕಾರ್ಯಾಲಯ ವಿಧಾನ ಸೌಧ.
4. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌದ, ಬೆಂಗಳೂರು.
5. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಚಿಕ್ಕಮಗಳೂರು.
6. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
7. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ ಮತ್ತು ಪಂ ರಾಜ್ ಇಲಾಖೆ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ ಮತ್ತು ಪಂ ರಾಜ್ ಇಲಾಖೆ, ಬೆಂಗಳೂರು.
11. ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. ಚಿಕ್ಕಮಗಳೂರು.
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ ಮತ್ತು ಪಂ ರಾಜ್ ಇಲಾಖೆ, ಬೆಂಗಳೂರು.
13. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
14. ಉಪ ನಿರ್ದೇಶಕರು, ನೆಟ್ ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖಜಾನಾ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
15. ಜಿಲ್ಲಾ ಖಜಾನಾಧಿಕಾರಿಗಳು, ಚಿಕ್ಕಮಗಳೂರು.
16. ಮುಖ್ಯ ಇಂಜನಿಯರ್, ಪಂಚಾಯತ್‌ರಾಜ್ ಇಂಜನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು.
17. ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು.
18. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು.
19. ವೆಬ್‌ಸೈಟ್/ಮಾಹಿತಿಕೇಂದ್ರ-(10 ಪ್ರತಿಗಳು), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. ಬಹುಮಹಡಿ ಕಟ್ಟಡ, ಬೆಂಗಳೂರು.
20. ಸಂಪಾದಕರು, ಕರ್ನಾಟಕ ವಿಕಾಸ.
21. ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ : 12 : ಗ್ರಾವಿಯೋ : 2015, ದಿನಾಂಕ 21-09-2015

(ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ವಿಧಾನಸಭಾ ಕ್ಷೇತ್ರದ ಗ್ರಾಮಗಳ ಆಯ್ಕೆ ಪಟ್ಟಿ)

(ರೂ .ಲಕ್ಷಗಳಲ್ಲಿ)

| | ಜಿಲ್ಲೆ | | ವಿಧಾನ ಸಭಾ ಕ್ಷೇತ್ರ | ಕ್ರ.ಸ | ಗ್ರಾಮಗಳ ಹೆಸರು | ಪ. ಜಾತಿ | ಪ. ಪಂಗಡ | ಒಟ್ಟು ಜನ ಸಂಖ್ಯೆ | ಗ್ರಾಮ ವಾರು ನಿಗದಿ ಪಡಿಸಿದ ಅನುದಾನ | ವಿಧಾನ ಸಭಾ ಕ್ಷೇತ್ರವಾರು ನಿಗದಿ ಪಡಿಸಿದ ಅನುದಾನ |
|---|---|---|---|---|---|---|---|---|---|---|
| 1 | ಚಿಕ್ಕಮಗಳೂರು | 1 | ಶೃಂಗೇರಿ | 1 | ಅರಳೀಕೊಪ್ಪ | 54 | 18 | 1065 | 75 | 600 |
| | | | | 2 | ಕಾನೂರು | 171 | 19 | 1206 | 75 | |
| | | | | 3 | ಹಲಸೂರು | 583 | 40 | 1267 | 75 | |
| | | | | 4 | ಕರ್ಕೇಶ್ವರ | 1047 | 165 | 2651 | 75 | |
| | | | | 5 | ನುಗ್ಗಿ | 255 | 65 | 1693 | 75 | |
| | | | | 6 | ನೆಮ್ಮಾರು | 101 | 255 | 1045 | 75 | |
| | | | | 7 | ಮೆಣಸೆ | 297 | 75 | 2236 | 75 | |
| | | | | 8 | ಹುಯಿಗೆರೆ | 574 | 23 | 1498 | 75 | |
| | | | | | ಒಟ್ಟು | 3082 | 660 | 12661 | 600 | |

(ಬೂವನಹಳ್ಳಿನಾಗರಾಜ್)

ನಿರ್ದೇಶಕರು (ಸುಗ್ರಾಯೋ) ಹಾಗೂ

ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ